

ಪಿ.ಕೆ. ಸಕ್ಸೇನಾ
ಪ್ರಧಾನ ವ್ಯವಸ್ಥಾಪಕರು

# ನೈರುತ್ಯ ರೈಲ್ವೆ

## ಪ್ರಧಾನ ವ್ಯವಸ್ಥಾಪಕರ

# 66ನೇ ಗಣರಾಜ್ಯೋತ್ಸವದ ಸಂದೇಶ-2015

**ರೈಲ್ವೆ ಪರಿವಾರದ ಆತ್ಮೀಯ ಸದಸ್ಯರೇ,**

66ನೇ ಗಣರಾಜ್ಯೋತ್ಸವದ ಈ ಶುಭ ಸಂದರ್ಭದಲ್ಲಿ ಎಲ್ಲ ರೈಲ್ವೆ ಉದ್ಯೋಗಿಗಳಿಗೆ, ಅವರ ಕುಟುಂಬದವರಿಗೆ ಮತ್ತು ನಮ್ಮ ಮೌಲ್ಯಯುತ ಗ್ರಾಹಕರಿಗೆ ಹೊಸ ವರ್ಷ ಸುಖ, ಸಮೃದ್ಧಿಯನ್ನು ತರಲೆಂದು ಹಾರೈಸುತ್ತೇನೆ.

ದೇಶದ ಪ್ರಗತಿಯಲ್ಲಿ ಭಾರತೀಯ ರೈಲ್ವೆ ಸಹಭಾಗಿಯಾಗಿರುವುದು ನಿಜಕ್ಕೂ ಹೆಮ್ಮೆಯ ವಿಷಯವಾಗಿದ್ದು ದೇಶದ ಸಾಮಾಜಿಕ ಮತ್ತು ಆರ್ಥಿಕ ಪ್ರಗತಿಗೆ ಅದು ಅಗಾಧವಾದ ಕೊಡುಗೆಯನ್ನು ನೀಡುತ್ತಿದೆ. ಅಂತೆಯೆ ನೈರುತ್ಯ ರೈಲ್ವೆಯೂ ಸಹಾ ಈ ಪ್ರದೇಶದ ನಿರಂತರ ಅಭಿವೃದ್ಧಿಯಲ್ಲಿ ಮಹತ್ವಪೂರ್ಣ ಪಾತ್ರ ವಹಿಸುತ್ತಿದೆ.

ನೈರುತ್ಯ ರೈಲ್ವೆಯು ಉತ್ತಮ ಬೆಳವಣಿಗೆಯ ಹಾದಿಯಲ್ಲಿ ಸಾಗುತ್ತಿರುವ ಸಂಗತಿಯನ್ನು ತಿಳಿಸಲು ನನಗೆ ಹರ್ಷವಾಗುತ್ತದೆ. ಪ್ರಸಕ್ತ ಆರ್ಥಿಕ ವರ್ಷದ ಮೊದಲ ಒಂಭತ್ತು ತಿಂಗಳುಗಳಲ್ಲಿ ಪ್ರಯಾಣಿಕ ಮತ್ತು ಸರಕು ಸಾಗಣೆಗಳಲ್ಲಿನ ಸಾಧನೆಯು ಉತ್ತೇಜನಕಾರಿಯಾಗಿದೆ. ಪ್ರಸಕ್ತ ಆರ್ಥಿಕ ವರ್ಷದ ಡಿಸೆಂಬರ್ 2014ರ ಅಂತ್ಯಕ್ಕೆ ಪ್ರಯಾಣಿಸಿದ ಪ್ರಯಾಣಿಕರ ಸಂಖ್ಯೆ **146** ದಶಲಕ್ಷ ಆಗಿದ್ದು **ಪ್ರತಿಶತ 1ರಷ್ಟು** ಹೆಚ್ಚಳ ದಾಖಲಿಸಿದೆ. ನೈರುತ್ಯ ರೈಲ್ವೆ ವಲಯದ ಪ್ರಾರಂಭಿಕ ಪ್ರಯಾಣಿಕರ ಗಳಿಕೆಯು ಡಿಸೆಂಬರ್ 2014ರವರೆಗೆ **1352 ಕೋಟಿ** ರೂ.ಗಳಾಗಿದ್ದು ಪ್ರತಿಶತ **19ರಷ್ಟು** ಹೆಚ್ಚಳ ಕಂಡಿದೆ.

ಕರ್ನಾಟಕ ಸರ್ಕಾರದಿಂದ ಕಬ್ಬಿಣದ ಅದಿರಿನ ರಫ್ತು ನಿಷೇಧ ಮತ್ತು ಗಣಿಗಾರಿಕೆಯ ಮೇಲೆ ಹೇರಲಾಗಿರುವ ನಿರ್ಬಂಧಗಳ ಹೊರತಾಗಿಯೂ ನೈರುತ್ಯ ರೈಲ್ವೆಯು **27.63 ದಶಲಕ್ಷ ಟನ್ ಸ**ರಕನ್ನು ಪ್ರಸಕ್ತ ಆರ್ಥಿಕ ವರ್ಷದ ಮೊದಲ ಒಂಭತ್ತು ತಿಂಗಳುಗಳಲ್ಲಿ ಸಾಗಿಸಿದ್ದು ಪ್ರತಿಶತ **7ರಷ್ಟು** ಹೆಚ್ಚಳ ದಾಖಲಿಸಿದೆ. ಪ್ರಸಕ್ತ ಆರ್ಥಿಕ ವರ್ಷದ ಡಿಸೆಂಬರ್ 2014ರವರೆಗೆ ಸರಕು ಸಾಗಣೆಯಿಂದ ಗಳಿಸಲಾದ ಆದಾಯವು **2401 ಕೋಟಿ** ರೂ.ಗಳಿಗೆ ಏರಿಕೆ ಕಂಡಿದ್ದು ಕಳೆದ ಆರ್ಥಿಕ ವರ್ಷದ ಇದೇ ಅವಧಿಯ ಆದಾಯಕ್ಕಿಂತ ಪ್ರತಿಶತ **12ರಷ್ಟು** ಹೆಚ್ಚಾಗಿದೆ. ಇದುವರೆಗಿನ ನಮ್ಮ ಪರಿಚಾಲನಾ ಹೆಚ್ಚುವರಿ ಆದಾಯವು **344 ಕೋಟಿ** ರೂ.ಗಳಾಗಿದೆ.

ನೈರುತ್ಯ ರೈಲ್ವೆಯು ಸುರಕ್ಷತೆ, ಭದ್ರತೆ, ಪ್ರಯಾಣಿಕರಿಗೆ ಸುಧಾರಿತ ಸೇವೆ, ಸಮಯಪಾಲನೆ ಮತ್ತು ಭವಿಷ್ಯದ ಅಗತ್ಯಗಳನ್ನು ಪೂರೈಸಿಕೊಳ್ಳುವ ದೃಷ್ಟಿಯಿಂದ ಮೂಲಭೂತ ಸೌಲಭ್ಯ ಅಭಿವೃದ್ಧಿಗೆ ಹೆಚ್ಚಿನ ಆದ್ಯತೆಯನ್ನು ನೀಡುತ್ತಿದೆ. ನೈರುತ್ಯ ರೈಲ್ವೆಯು ಹಲವು ವಿಧಾನಗಳಿಂದ, ಅದರಲ್ಲೂ ಮುಖ್ಯವಾಗಿ ಸಬ್‌ವೇಗಳನ್ನು ನಿರ್ಮಿಸುವುದರ ಮೂಲಕ **45** ಲೆವೆಲ್ ಕ್ರಾಸಿಂಗ್‌ಗಳನ್ನು ತೆಗೆದುಹಾಕಿದೆ ಮತ್ತು ಈ ಕಾರ್ಯದಲ್ಲಿ ಮುಂದೆಯೂ ಇದೇ ವೇಗವನ್ನು ಕಾಯ್ದುಕೊಳ್ಳಲಾಗುವುದು.

ಪ್ರಯಾಣಿಕರ ಅನುಕೂಲಕ್ಕಾಗಿ ಶ್ರವ್ಯ-ದೃಶ್ಯ ವಿಚಾರಣಾ ಟರ್ಮಿನಲ್‌ಗಳು, ಡಿಜಿಟಲ್ ಪ್ರದರ್ಶನಾ ಫಲಕಗಳು, ಬೋಗಿ ಮಾರ್ಗದರ್ಶನ ವ್ಯವಸ್ಥೆ, ಕಿರು ಸಂದೇಶ ಸೇವೆ (ಎಸ್.ಎಮ್.ಎಸ್) ಆಧಾರಿತ ದೂರು ಪರಿಹಾರ, ಇ-ಟಿಕೆಟಿಂಗ್, ಎಸ್.ಎಮ್.ಎಸ್ ಮೂಲಕ ಟಿಕೆಟ್ ಪಡೆಯುವ ವ್ಯವಸ್ಥೆ ಹೀಗೆ ಬೃಹತ್ಪ್ರಮಾಣದಲ್ಲಿ ಮಾಹಿತಿ ತಂತ್ರಜ್ಞಾನವನ್ನು ನಾವು ಬಳಸಿಕೊಳ್ಳುತ್ತಿದ್ದೇವೆ.

ಟಿಕೆಟ್‌ಗಳ ಸುಲಭ ಲಭ್ಯತೆಗಾಗಿ ಆರಕ್ಷಣಾ ರಹಿತ ಟಿಕೆಟ್ ವ್ಯವಸ್ಥೆ **(ಯು.ಟಿ.ಎಸ್)**ಯನ್ನು **249** ನಿಲ್ದಾಣಗಳಿಗೆ ವಿಸ್ತರಿಸಲಾಗಿದೆ ಮತ್ತು ಆರಕ್ಷಿತ ಟಿಕೆಟ್‌ಗಳನ್ನು ಈಗ **158** ಸ್ಥಳಗಳಲ್ಲಿ ಪಡೆಯಬಹುದಾಗಿದೆ. ಇದರ ಜೊತೆಗೆ ಪ್ರಯಾಣಿಕರಿಗೆ ಆರಕ್ಷಣಾ ರಹಿತ ಟಿಕೆಟ್ ನೀಡಲು **49** ಜನ ಸಾಧಾರಣ ಟಿಕೆಟ್ ಬುಕಿಂಗ್ ಸೇವಕ್ **(ಜೆ.ಟಿ.ಬಿ.ಎಸ್)**ರನ್ನು ನೇಮಿಸಲಾಗಿದೆ.

ಸುಭದ್ರ ಪ್ರಯಾಣಕ್ಕಾಗಿ ನೈರುತ್ಯ ರೈಲ್ವೆಯು ರೈಲು ನಿಲ್ದಾಣಗಳಲ್ಲಿ ಮತ್ತು ರೈಲುಗಳಲ್ಲಿ ಭದ್ರತಾ ಸಲಕರಣೆಗಳನ್ನು ನಿರಂತರವಾಗಿ ಬಲಪಡಿಸುತ್ತಿದೆ. ರೈಲುಗಳಲ್ಲಿ ಭದ್ರತೆ ಒದಗಿಸುವುದು, ಭದ್ರತಾ ಕಣ್ಗಾವಲು, ರೈಲ್ವೆ ಆವರಣದಲ್ಲಿ ಅನಧಿಕೃತ ವ್ಯಕ್ತಿಗಳ ಪ್ರವೇಶವನ್ನು ತಡೆಯುವುದು ಇವೆಲ್ಲಾ ನಮ್ಮ ಭದ್ರತಾ ಯೋಜನೆಯ ಮುಖ್ಯ ಅಂಶಗಳಾಗಿವೆ. ಸೂಕ್ಷ್ಮವೆಂದು ಗುರ್ತಿಸಲಾದ ಭಾಗಗಳಲ್ಲಿ **91** ರೈಲುಗಳಲ್ಲಿ ಯೋಗ್ಯ ಸಂಖ್ಯೆಯ ರೈಲ್ವೆ ಸುರಕ್ಷಾ ದಳ**(ಆರ್.ಪಿ.ಎಫ್)/ಜಿ.ಆರ್.ಪಿ** ಸಿಬ್ಬಂದಿಗಳನ್ನು ರಕ್ಷಣಾ ಕರ್ತವ್ಯಕ್ಕೆ ನಿಯೋಜಿಸಲಾಗಿದ್ದು ಎಲ್ಲ ಬೋಗಿಗಳ ಅದರಲ್ಲೂ ವಿಶೇಷವಾಗಿ ಮಹಿಳಾ ಬೋಗಿಗಳ ರಕ್ಷಣೆಗೆ ಹೆಚ್ಚಿನ ಒತ್ತು ನೀಡಲಾಗುತ್ತಿದೆ. ನೈರುತ್ಯ ರೈಲ್ವೆಯ ಮೂರು ವಿಭಾಗೀಯ ಕೇಂದ್ರಗಳು, ಯಶವಂತಪುರ ಮತ್ತು ಹುಬ್ಬಳ್ಳಿ ವಿಭಾಗದ **7** ನಿಲ್ದಾಣಗಳು ಸೇರಿ ಒಟ್ಟು **11** ಪ್ರಮುಖ ನಿಲ್ದಾಣಗಳಲ್ಲಿ ಸಿ.ಸಿ. ಕ್ಯಾಮೆರಾಗಳನ್ನು ಅಳವಡಿಸಲಾಗಿದೆ. ಪರಿಪೂರ್ಣ ಭದ್ರತಾ ವ್ಯವಸ್ಥೆಗಾಗಿ ಸಮಗ್ರ ಭದ್ರತಾ ವ್ಯವಸ್ಥೆ**(ಐ.ಎಸ್.ಎಸ್)**ಯನ್ನು ಬೆಂಗಳೂರು, ಯಶವಂತಪುರ ಮತ್ತು ಮೈಸೂರು ರೈಲುನಿಲ್ದಾಣಗಳಲ್ಲಿ ಅಳವಡಿಸಲಾಗುತ್ತಿದೆ.

ಸನ್ಮಾನ್ಯ ಪ್ರಧಾನಮಂತ್ರಿಗಳ ಸ್ವಚ್ಛ ಭಾರತ ಅಭಿಯಾನದ ಕರೆಗೆ ಉತ್ತರವಾಗಿ **02** ಅಕ್ಟೋಬರ್, 2014ರಂದು ನೈರುತ್ಯ ರೈಲ್ವೆ ವಲಯದಾದ್ಯಂತ ನಿಲ್ದಾಣಗಳಲ್ಲಿ, ರೈಲ್ವೆ ಕಾಲೋನಿಗಳಲ್ಲಿ, ಕಾರ್ಯ ಸ್ಥಳಗಳಲ್ಲಿ ವಿಶೇಷ ಸ್ವಚ್ಛತಾ ಅಭಿಯಾನವನ್ನು ಆರಂಭಿಸಲಾಯಿತು ಮತ್ತು ಅಭಿಯಾನವನ್ನು ನಿರಂತರವಾಗಿ ಮುಂದುವರೆಸಲಾಗುವುದು.

ಕಳೆದ ವರ್ಷದ ರೈಲ್ವೆ ಬಜೆಟ್‌ನಲ್ಲಿ ಘೋಷಿಸಲಾದ **18** ಹೊಸ ರೈಲುಗಳ ಪೈಕಿ ಇಲ್ಲಿಯವರೆಗೆ **11** ಹೊಸ ರೈಲುಗಳನ್ನು ಆರಂಭಿಸಲಾಗಿದೆ. ಇದಲ್ಲದೇ ಬಜೆಟ್‌ನಲ್ಲಿ ಘೋಷಿಸದಂತೆ **2** ರೈಲುಗಳ ಸಂಚಾರದ ಆವೃತ್ತಿಯನ್ನು ಹೆಚ್ಚಿಸಲಾಗಿದೆ.

ರೈಲು ಬಳಕೆದಾರರ ಬೇಡಿಕೆಯನ್ನು ಪೂರೈಸಲು ಮತ್ತು ಪ್ರಯಾಣಿಕರ ದಟ್ಟಣೆ ಕಡಿಮೆ ಮಾಡಲು ಏಪ್ರಿಲ್ 2014 ರಿಂದ ಡಿಸೆಂಬರ್ 2014 ರ ಅವಧಿಯಲ್ಲಿ **3503** ವಿಶೇಷ ರೈಲು ಸಂಚಾರಗಳ ವ್ಯವಸ್ಥೆಯನ್ನು ಮಾಡಲಾಗಿದೆ ಮತ್ತು **3103** ಹೆಚ್ಚುವರಿ ಬೋಗಿಗಳನ್ನು ಚಾಲ್ತಿಯ ರೈಲುಗಳಿಗೆ ಅಳವಡಿಸಲಾಗಿದೆ. ನೈರುತ್ಯ ರೈಲ್ವೆಯು, ಡಿಸೆಂಬರ್ 2014ರವರೆಗೆ, ಸಮಯ ಪಾಲನೆಯಲ್ಲಿ **ಪ್ರತಿಶತ 97ರಷ್ಟು** ಸಾಧನೆ ಮಾಡಿ ರೈಲ್ವೆ ಮಂಡಳಿ ನಿಗದಿ ಪಡಿಸಿದ ಗುರಿಯನ್ನು ಸಾಧಿಸಿದೆ.

ನಮ್ಮ ಎಲ್ಲ ಚಟುವಟಿಕೆಗಳಲ್ಲೂ **ಗ್ರಾಹಕನೇ** ಕೇಂದ್ರ ಬಿಂದುವಾಗಿದ್ದಾನೆ. ನಮ್ಮ ಸೇವೆಗಳನ್ನು ಪ್ರಯಾಣಿಕ ಸ್ನೇಹಿಯಾಗಿಯೂ ಮತ್ತು ರೈಲ್ವೆ ಪ್ರಯಾಣವನ್ನು ಹಿತಕರವಾಗಿರುವಂತೆಯೂ ನೋಡಿಕೊಳ್ಳುವುದೇ ನಮ್ಮ ದೃಢ ಸಂಕಲ್ಪವಾಗಿದೆ. ನೈರುತ್ಯ ರೈಲ್ವೆ ವ್ಯಾಪ್ತಿಯಲ್ಲಿ ಪರಿಸರ ಸ್ನೇಹಿ ಬಯೋ-ಶೌಚಾಲಯಗಳನ್ನು ಪರಿಚಯಿಸುವುದು, ಅತ್ಯಾಧುನಿಕ ಯಾಂತ್ರೀಕೃತ ಲಾಂಡ್ರಿಗಳನ್ನು ಬಳಸುವುದರ ಮೂಲಕ ಹೊದಿಕೆಗಳ ಗುಣಮಟ್ಟವನ್ನು ಖಚಿತ ಪಡಿಸುವುದು, ನಿಲ್ದಾಣಗಳನ್ನು/ಬೋಗಿಗಳನ್ನು ಸ್ವಚ್ಛಗೊಳಿಸಲು ಯಂತ್ರಗಳನ್ನು ಬಳಸುವುದು ಇವೇ ಮೊದಲಾದ ಯೋಜನೆಗಳ ಜಾರಿಗೆ ಕ್ರಮ ಕೈಗೊಳ್ಳಲಾಗುತ್ತಿದೆ.

ಪ್ರಯಾಣಿಕರಿಗೆ ಹೆಚ್ಚಿನ ಸೌಲಭ್ಯ ಮತ್ತು ಅನುಕೂಲಗಳ ಲಭ್ಯತೆ, ಉತ್ತಮ ಪರಿಸರ ಮತ್ತು ಸೌಂದರ್ಯ ವರ್ಧನೆಗಾಗಿ ನೈರುತ್ಯ ರೈಲ್ವೆ ವ್ಯಾಪ್ತಿಯಲ್ಲಿ ಇದುವರೆಗೆ **22** ನಿಲ್ದಾಣಗಳನ್ನು **"ಆದರ್ಶ ನಿಲ್ದಾಣ"**ಗಳಾಗಿ ಆಧುನೀಕರಣಗೊಳಿಸಲಾಗಿದೆ. ಇನ್ನೂ **4** ನಿಲ್ದಾಣಗಳನ್ನು **ಆದರ್ಶ ನಿಲ್ದಾಣಗಳಾಗಿ** ಅಭಿವೃದ್ಧಿಪಡಿಸುವ ಕಾರ್ಯ ಪ್ರಗತಿಯಲ್ಲಿದೆ. ಹಲವಾರು ಪ್ರಯಾಣಿಕ ಸೌಲಭ್ಯಗಳ ವ್ಯವಸ್ಥಿತ ಸುಧಾರಣೆಗಾಗಿ **19.81ಕೋಟಿ** ರೂ.ಗಳನ್ನು ಖರ್ಚು ಮಾಡಲಾಗಿದೆ. ಹುಬ್ಬಳ್ಳಿ ರೈಲು ನಿಲ್ದಾಣದಲ್ಲಿ 1ನೇಪ್ಲಾಟ್‌ಫಾರಂನೊಂದಿಗೆ 2 ಮತ್ತು 3 ನೇ ಪ್ಲಾಟ್‌ಫಾರಂಅನ್ನು ಸಂಪರ್ಕಿಸುವ ಸಬ್‌ವೇಯನ್ನು 4 ಮತ್ತು 5 ನೇ ಪ್ಲಾಟ್‌ಫಾರಂವರೆಗೂ ವಿಸ್ತರಿಸಲಾಗಿದ್ದು ಅಂತಿಮ ಹಂತದ ಕಾಮಗಾರಿಗಳು ನಡೆಯುತ್ತಿದೆ.

ನೈರುತ್ಯ ರೈಲ್ವೆ ವ್ಯಾಪ್ತಿಯ ವಿವಿಧ ಭಾಗಗಳಲ್ಲಿ ಮೂಲಭೂತ ಸೌಲಭ್ಯಗಳ ಸುಧಾರಣೆ ಮತ್ತು ಮಾರ್ಗ ಸಾಮರ್ಥ್ಯ ವೃದ್ಧಿಯ ಬಗ್ಗೆ ವಿಶೇಷ ಗಮನ ನೀಡಲಾಗುತ್ತಿದೆ. ಪ್ರಸಕ್ತ ಆರ್ಥಿಕ ವರ್ಷದ ಡಿಸೆಂಬರ್ 2014ರವರೆಗೆ ರಾಮನಗರ-ಮೈಸೂರು ಜೋಡಿ ರೈಲು ಮಾರ್ಗ(91.5 ಕಿ.ಮೀ.) ಕಾಮಗಾರಿಯಲ್ಲಿ **19 ಕಿ.ಮೀ.** ಉದ್ದದ ಮಾರ್ಗವನ್ನು ಪೂರ್ಣಗೊಳಿಸಿ 02 ಜುಲೈ 2014ರಂದು ಪ್ರಯಾಣಿಕ ಸಂಚಾರಕ್ಕೆ ಲೋಕಾರ್ಪಣೆಗೊಳಿಸಲಾಯಿತು. ಬೀರೂರು-ಶಿವನಿ ಜೋಡಿ ರೈಲು ಮಾರ್ಗ ಕಾಮಗಾರಿಯಲ್ಲಿ **11ಕಿ.ಮೀ.** ಉದ್ದದ ಮಾರ್ಗವನ್ನು ಮತ್ತು ಶಿವನಿ-ಹೊಸದುರ್ಗ ನಡುವಿನ **10 ಕಿ.ಮೀ.** ಉದ್ದದ ಜೋಡಿ ರೈಲು ಮಾರ್ಗವನ್ನು ನಿಗದಿತ ಅವಧಿಯಲ್ಲಿ ಪೂರ್ಣಗೊಳಿಸಲಾಗಿದ್ದು ಈ ಎರಡು ಭಾಗಗಳನ್ನು ಮಾರ್ಚ್ 2015ಕ್ಕೆ ಲೋಕಾರ್ಪಣೆಗೊಳಿಸಲಾಗುವುದು. ರಾಮನಗರ-ಮೈಸೂರು ಜೋಡಿ ರೈಲು ಮಾರ್ಗ ಕಾಮಗಾರಿಯಲ್ಲಿ ಇನ್ನೂ **10 ಕಿ.ಮೀ.** ಮಾರ್ಗವನ್ನು ನಿಗದಿತ ಅವಧಿಯಲ್ಲಿ ಪೂರ್ಣಗೊಳಿಸಲಾಗಿದ್ದು ಡಿಸೆಂಬರ್ 2014ರಲ್ಲಿ ಈ ಮಾರ್ಗದಲ್ಲಿ ಪರೀಕ್ಷಾರ್ಥವಾಗಿ ಎಂಜಿನ್‌ಅನ್ನು ಓಡಿಸಲಾಯಿತು. ಹೊಸದುರ್ಗ-ಚಿಕ್ಕಜಾಜೂರು ಜೋಡಿ ರೈಲು ಮಾರ್ಗ ಯೋಜನೆಯಲ್ಲಿ **10 ಕಿ.ಮೀ.**ನಷ್ಟು ಉದ್ದದ ಮಾರ್ಗವನ್ನೂ ಸಹಾ ನಿಗದಿತ ಅವಧಿಯಲ್ಲಿ ಪೂರ್ಣಗೊಳಿಸಲಾಗಿದೆ. ಜೊತೆಗೆ ಹಾಸನ-ಬೆಂಗಳೂರು ರೈಲು ಮಾರ್ಗ (166 ಕಿ.ಮೀ.) ಯೋಜನೆಯಲ್ಲಿ ಬಿ.ಜಿ.ನಗರ-ಯಡಿಯೂರು ನಡುವೆ **16 ಕಿ.ಮೀ**. ಉದ್ದದ ಹೊಸ ರೈಲು ಮಾರ್ಗವನ್ನು 30 ನವೆಂಬರ್ 2014ರಂದು ಪೂರ್ಣಗೊಳಿಸಲಾಯಿತು.

ನೈರುತ್ಯ ರೈಲ್ವೆಯ ಅಮೂಲ್ಯ ಆಸ್ತಿಯೆಂದರೆ ಉತ್ಸಾಹ ಪೂರ್ಣ ಮತ್ತು ಸಮರ್ಪಣಾ ಭಾವದ ಕಾರ್ಮಿಕ ಶಕ್ತಿ. ಅವರ ಅಗತ್ಯಗಳಿಗೆ ನಾವು ಸ್ಪಂದಿಸುತ್ತಿದ್ದೇವೆ ಮತ್ತು ಅವರ ಒಳಿತಿಗಾಗಿ ಸರ್ವ ಪ್ರಯತ್ನವನ್ನು ಮಾಡುತ್ತಿದ್ದೇವೆ. ಸಿಬ್ಬಂದಿ ಕಲ್ಯಾಣ ನಿಧಿಯಿಂದ ಅನೇಕ ಸಿಬ್ಬಂದಿ ಕಲ್ಯಾಣ ಚಟುವಟಿಕೆಗಳನ್ನು ಕೈಗೊಳ್ಳಲಾಗುತ್ತಿದೆ.

ನೈರುತ್ಯ ರೈಲ್ವೆ ಮಹಿಳಾ ಕ್ಷೇಮಾಭಿವೃದ್ಧಿ ಸಂಘಟನೆಯ (ಎಸ್.ಡಬ್ಲ್ಯು.ಆರ್.ಡಬ್ಲ್ಯು.ಡಬ್ಲ್ಯು.ಓ) ಯೋಗಕ್ಷೇಮ ಪರವಾದ ಸಾಮಾಜಿಕ ಕಾರ್ಯಗಳನ್ನು ಮೆಚ್ಚಲೇಬೇಕು. ನೈರುತ್ಯ ರೈಲ್ವೆಯ ಸಾಂಸ್ಕೃತಿಕ ಸಂಘಟನೆ **"ಚಿಲ್‌ಬಿಲ್"**, ಕಲೆ ಮತ್ತು ಸಂಸ್ಕೃತಿಯ ಉನ್ನತಿಗೆ ಶ್ರಮಿಸುತ್ತಿರುವುದು ಸುತ್ತ್ಯಾರ್ಹವಾಗಿದೆ. ನೈರುತ್ಯ ರೈಲ್ವೆಯ ನಾಗರಿಕ ರಕ್ಷಣಾ ಸಂಘಟನೆ ಹಾಗೂ ಸ್ಕೌಟ್ಸ್ ಮತ್ತು ಗೈಡ್ಸ್‌ಗಳು ಅಗತ್ಯ ಸಂದರ್ಭಗಳಲ್ಲಿ ಸಲ್ಲಿಸಿದ ನಿಸ್ವಾರ್ಥ ಸೇವೆಯನ್ನು ನಾವು ಮರೆಯುವಂತಿಲ್ಲ. ಕ್ರೀಡಾ ವಿಭಾಗದಲ್ಲಿ ನಮ್ಮ ಕ್ರೀಡಾಸ್ಪರ್ಧಿಗಳು ಅಖಿಲ ಭಾರತ ರೈಲ್ವೆ ಚಾಂಪಿಯನ್‌ಷಿಪ್‌ನ ವಿವಿಧ ವಿಭಾಗಗಳಲ್ಲಿ ಉತ್ತಮ ಪ್ರದರ್ಶನ ತೋರುವ ಮೂಲಕ ನೈರುತ್ಯ ರೈಲ್ವೆಗೆ ಗೌರವ ತಂದು ಕೊಟ್ಟಿದ್ದಾರೆ.

ನೈರುತ್ಯ ರೈಲ್ವೆಯ ಎಲ್ಲ ಸಾಧನೆಗಳಿಗೆ ವಲಯದ ಮಾನ್ಯತೆ ಪಡೆದ ಕಾರ್ಮಿಕ ಸಂಘಟನೆ ಮತ್ತು ಇತರ ಒಕ್ಕೂಟಗಳ ಸಕಾರಾತ್ಮಕ ಬೆಂಬಲವೂ ಕಾರಣವಾಗಿದೆ. ಸೌಹಾರ್ದಯುತ ಔದ್ಯೋಗಿಕ ಸಂಬಂಧ ಏರ್ಪಡಲು ಮತ್ತು ಸಿಬ್ಬಂದಿಗಳಲ್ಲಿ ನೈತಿಕ ಸ್ಥೈರ್ಯ ಕಾಪಾಡಲು ಸಕ್ರಿಯವಾಗಿ ಪಾಲ್ಗೊಂಡ ಅವರಿಗೆ ಧನ್ಯವಾದ ಹೇಳಬಯಸುತ್ತೇನೆ.

ನಮ್ಮ ಗುರಿ ಸಾಧನೆಗಾಗಿ ಶ್ರಮಿಸಿದ ಎಲ್ಲ ಅಧಿಕಾರಿಗಳು, ಮೇಲ್ವಿಚಾರಕರು ಮತ್ತು ಸಿಬ್ಬಂದಿಗಳಿಗೆ ನನ್ನ ಅಭಿನಂದನೆಗಳು. ನಾವೆಲ್ಲ ಒಟ್ಟಾಗಿ ಕೆಲಸ ಮಾಡಿ ನಮ್ಮ ಕಾರ್ಯ ನಿರ್ವಹಣೆಯನ್ನು ಮತ್ತಷ್ಟು ಉತ್ತಮ ಪಡಿಸೋಣ.

ಈ ಶುಭ ಸಂದರ್ಭದಲ್ಲಿ ನಿಮಗೆ ಮತ್ತು ನಿಮ್ಮ ಕುಟುಂಬದವರಿಗೆ ಮುಂಬರುವ ದಿನಗಳು ಶಾಂತಿ ಮತ್ತು ಸಮೃದ್ಧಿಯನ್ನು ತರಲಿ ಮತ್ತು ನಿಮ್ಮ ಎಲ್ಲ ಪ್ರಯತ್ನಗಳಿಗೂ ಯಶಸ್ಸು ದೊರಕಲಿ ಎಂದು ಆಶಿಸುತ್ತೇನೆ.

ಹುಬ್ಬಳ್ಳಿ
26 ಜನವರಿ,2015

**ಜೈ ಹಿಂದ್**

ಪಿ.ಕೆ.ಸಕ್ಸೇನಾ
ಪ್ರಧಾನ ವ್ಯವಸ್ಥಾಪಕರು

# Important Events - 2014-15



Smt. Neelima Saxena, President, SWR Women's Welfare Organization seen distributing Gifts to an inpatient of Railway Central Hospital, Hubli on the occasion of Independence Day celebrations of SWRWWO held on 15-08-2014. Other Executive members of SWRWWO are also seen.



Shri P.K. Saxena, GM/SWR seen inspecting the RPF Parade on the occasion of RPF Raising Day held at Railway Sports Ground, Hubli on 29-09-2014. Shri R.P. Pawar, Dy.CSC/SWR looks on.




Shri D.V. Sadananda Gowda, Former MR seen presenting a prestigious MR's Civil Engineering (Construction) Efficiency Shield bagged jointly by South Western Railway and Northeast Frontier Railway for 2013-14, receiving by Shri P.K. Saxena, GM/SWR & GM/NFR at the 59th National Awards Presentation Ceremony held at Bangalore on 10-10-2014.



Shri D.V. Sadananda Gowda, Former MR seen flagging off Sukhamangalam Yatri Special and Inauguration of Wi-Fi at Bangalore Railway Station on 25-10-2014. Shri Ananth Kumar, Union Minister of Chemicals & Fertilisers and other dignitaries are also seen.



:Shri D.V. Sadananda Gowda, Former MR seen flagging off 3 pairs of trains viz., between Yesvantpur-Nelamangala-Yesvantpur, Yesvantpur-Hosur-Yesvantpur & Bangalore City -Tumkur-Bangalore City at a function held at Yesvantpur Rly. station on 01-11-2014. Shri Ananth Kumar, Union Minister of Chemicals & Fertilisers & other dignitaries are seen.



Shri P.K. Saxena, GM/SWR seen welcoming by presenting a bouquet to Smt. Bijoya Chakravarty, Chairperson of Parliamentary Committee on Empowerment of Women at a meeting held at Bangalore on 13-11-2014.




Shri P.K. Saxena, GM/SWR seen addressing at the Mahaparinirwan Diwas of Bharath Ratna Dr. Baba Saheb Ambedkar held at Railway Officers' Club(ROC), Hubli on 08-12-2014. Shri K. Harikrishnan, CPO/SWR looks on.



Shri P.K. Saxena, GM/SWR seen inspecting the way side station as part of Annual Inspection of Bangalore-Tumkur section of Bangalore Division held on 15-12-2014. DRM/SBC and others are seen.



Shri P.K. Saxena, GM/SWR seen inspecting Nittur Railway station as part of Annual Inspection of Tumkur-Arsikere section of Mysore Division held on 15-12-2014. DRM/MYS and others are seen.



P.K. Saxena, GM/SWR seen releasing New Year Calenders & Diaries of SWR at a function held at GM's Office Conference Hall, Hubli on 01-01-2015. Other Senior Officials are also seen.



Shri P.K. Saxena, Patron, SWRSA & GM/SWR, seen presenting Railway Board's cash award of Rs. 2,71,250/- to Shri Sajan Prakash, outstanding swimmer of SWR who participated in National & International Swimming events & won Medals, at the Felicitation function of Sports Persons of SWR, held at GM's Conference hall, Hubli on 02-01-2015.



Shri P.K. Saxena, Patron, SWRSA & GM/SWR seen patting the SWR's Hockey Team on 21-01-2015 for winning "A" Division Runners Up Hockey League Championship Trophy conducted by Karnataka State Hockey Association held at Bangalore on 11-01-2015.